



‘ಕಮ್ಯುನಿಟಿ ಡ್ರಮ್ ಜಾಮ್’ ಹತ್ತು ವರ್ಷಗಳ ಹಿಂದೆ ಇಂತಹುದೊಂದು ಪರಿಕಲ್ಪನೆಯನ್ನು ಹೊತ್ತು ತಂದಿತು. ಕೋವಿಡ್ ಕಾಲದಲ್ಲಿ ಇಲ್ಲಿ ‘ಡ್ರಮ್ ಜಾಮ್’ ನಡೆದಿಲ್ಲವಷ್ಟೆ. ಉಳಿದಂತೆ ಅದು ಸತತವಾಗಿ ನಡೆಯುತ್ತಾ ಬಂದಿದೆ. ಪ್ರತಿ ತಿಂಗಳ ಮೂರನೇ ಭಾನುವಾರ ಸಂಜೆ 4ರಿಂದ 6ರ ವರೆಗೆ ಯಾರಿಗೆ ಬೇಕಾದರೂ ಈ ಸಂಗೀತ ರಸಾಸ್ವಾದ ಉಚಿತವಾಗಿ ಲಭ್ಯ. ಅನೇಕರು ತಂಡೋಪತಂಡವಾಗಿ ಬಂದು ಅನುಭವ ತಮ್ಮದಾಗಿಸಿಕೊಳ್ಳುತ್ತಾರೆ.

**-ಬಾಲಾಜಿ ಮರಗೊಂಡ,**

**ಸಹಾಯಕ ಕ್ಯುರೇಟರ್, ಮೆಟ್ರೊ ಬುಲೆವಾರ್ಡ್**

ನಾವು ಡ್ರಮ್ ಜಾಮ್ ಶುರುಮಾಡಿದೆವು. ಮೊದಲ ಬಾರಿಗೇ ನೂರಕ್ಕೂ ಹೆಚ್ಚು ಜನರು ಬಂದಿದ್ದರು. ಸಂಗೀತ ಕೌಶಲ ಬಲ್ಲವರು ವಾದ್ಯಗಳನ್ನು ನುಡಿಸುವುದು ಬೇರೆ. ಬಾರದವರೂ ಆ ಅನುಭವ ಪಡೆದುಕೊಳ್ಳುವುದು ಬೇರೆ. ಸಂಗೀತವನ್ನು ಪ್ರಜಾಪ್ರಭುತ್ವಗೊಳಿಸುವ ಪರಿಕಲ್ಪನೆ ಇದು. ಎಲ್ಲರೂ ಒಂದಾಗುವ ಮಾರ್ಗವೂ ಹೌದು’ ಎಂದು ವಸುಂಧರಾ ‘ಡ್ರಮ್ ಜಾಮ್’ನ ಉದ್ದೇಶ ತೆರೆದಿಟ್ಟರು.

ಇಂತಹ ಪರಿಕಲ್ಪನೆ ಸಾಕಾರಗೊಂಡ ಮೇಲೆ ಅವರಿಗೆ ಹಲವು ಅಪರೂಪದ ಅನುಭವಗಳು ದಕ್ಕಿವೆ. ಅವು ಅಸಂಖ್ಯ ಎನ್ನುತ್ತಲೇ ಅವರು ಎರಡನ್ನು ಹಂಚಿಕೊಂಡರು. ಒಮ್ಮೆ, ಮನೆಗೆಲಸ ಮಾಡುವ ಮಹಿಳೆಯೊಬ್ಬರು ಪ್ಲಾಸ್ಟಿಕ್ ಚೀಲ ಕೈಲಿ ಹಿಡಿದುಕೊಂಡು ಬುಲೆವಾರ್ಡ್ ಬಳಿ ನಡೆದುಹೋಗುತ್ತಿದ್ದರಂತೆ. ‘ಡ್ರಮ್ ಜಾಮ್’ ನೋಡಿದ್ದೇ ಅವರ ಪಾದಗಳು ನಿಂತಿವೆ. ನಿಧಾನವಾಗಿ, ತುಸು ಸಂಕೋಚದಿಂದ ಡ್ರಮ್‌ಗಳನ್ನು ಇರಿಸಿದ ಜಾಗದತ್ತ ಹೆಜ್ಜೆ ಹಾಕಿದ ಅವರು, ಸ್ವಲ್ಪ ಹೊತ್ತು ಆ ಸಂಗೀತವನ್ನು ಕಿವಿಗಿಳಿಸಿಕೊಂಡವರೇ ಜೋರಾಗಿ ಕುಣಿಯತೊಡಗಿದರು. ಮುಖದಲ್ಲೊಂದು ತೃಪ್ತ ನಗೆ ಮೂಡಿಸಿಕೊಂಡು ಹೊರಟರು. ಇನ್ನೊಮ್ಮೆ, ಟ್ರಾನ್ಸ್‌ಜೆಂಡರ್‌ಗಳು ಗಕ್ಕನೆ ನಿಂತು, ಸಂಗೀತದ ರಸಾಸ್ವಾದ ಮಾಡಿ ತಮ್ಮದೇ ಶೈಲಿಯಲ್ಲಿ ನೃತ್ಯ ಮಾಡಿ ಖುಷಿಪಟ್ಟಿದ್ದರು.

ನೂರನೇ ಕಂತಿನ ‘ಡ್ರಮ್ ಜಾಮ್’ ಒಂದು ರೀತಿ ಹಳೆಯ ಸಂಗೀತಪ್ರೇಮಿಗಳ ಸಮ್ಮಿಲನವೂ ಆಗಿತ್ತೆಂದು ವಸುಂಧರಾ ಹೇಳುತ್ತಾರೆ. ಯಾವುದೋ ಬೇರೆ ರಾಜ್ಯದವರು ಇಲ್ಲಿ ಕಲಿಕೆಗೆ ಬಂದಿದ್ದಾಗ ‘ಡ್ರಮ್ ಜಾಮ್’ನ ಸಂಗೀತಾನುಭವವನ್ನು ವರ್ಷಗಳ ಹಿಂದೆ ಪಡೆದುಕೊಂಡಿದ್ದರು. ಅವರು ಮತ್ತೆ ಆ ದಿನ ಬಂದು, ಹಳೆಯ ನೆನಪನ್ನು ಮೆಲುಕು ಹಾಕಿದರು. ಸಂಗೀತ ಬಾರದವರೇ ಇಂತಹ ಕಾರ್ಯಕ್ರಮಗಳನ್ನು ಹೆಚ್ಚು ಸುಖಿಸುವುದನ್ನು ವಸುಂಧರಾ ಗಮನಿಸಿದ್ದಾರೆ. ಶಾಸ್ತ್ರೀಯ ಕಲಿಕೆ, ಕೌಶಲ ಎನ್ನುವ ಭಾರಗಳನ್ನು ಹಾಕಿರುವುದರಿಂದ ಯಾವುದೋ ಕಾರಣಕ್ಕೆ ಸಂಗೀತ ಕಲಿಯಲಾಗದವರನ್ನು ಅದರಿಂದ ಸದಾಕಾಲ ವಂಚಿತರನ್ನಾಗಿ ಮಾಡುವುದು ಸರಿಯಲ್ಲ ಎನ್ನುವುದು ಅವರ ಕಾಳಜಿ.

ಬುಲೆವಾರ್ಡ್‌ನಲ್ಲಿ ನಡೆಯುವ ‘ಡ್ರಮ್ ಜಾಮ್’ನಲ್ಲಿ ಒಮ್ಮೆ ಡ್ರಮ್‌ಗಳ ರುಚಿ ಹತ್ತಿಸಿಕೊಂಡು, ಆಮೇಲೆ ಅದನ್ನು ಇನ್ನಷ್ಟು ಕಲಿತವರೆಷ್ಟೋ. ವಸುಂಧರಾ ಅವರು ಭಾಗಿಯಾಗಿರುವ ‘ಕಮ್ಯುನಿಟಿ ಡ್ರಮ್ ಜಾಮ್’ ಸಂಗೀತವನ್ನು ಚಿಕಿತ್ಸಕ ಮಾರ್ಗವಾಗಿಯೂ ನೋಡುತ್ತಿರುವ ಸಂಸ್ಥೆ. ನಿಮ್ಹಾನ್ಸ್ ಜತೆಗೂ ಇದು ಕೆಲಸ ಮಾಡುತ್ತಿದೆ. ಪ್ರತಿವರ್ಷ ಅಕ್ಟೋಬರ್‌ನಲ್ಲಿ ಹೆಸರಘಟ್ಟದಲ್ಲಿ ಸಂಗೀತ ಕಲಿಕೆಯ ಕಮ್ಮಟವನ್ನೂ ಈ ಸಂಸ್ಥೆ ಆಯೋಜಿಸುತ್ತದೆ.

‘ದೈಹಿಕವಾಗಿ ನ್ಯೂನತೆ ಇರುವವರು ಸಂಗೀತವನ್ನು ಮನೋಬಲ ಹೆಚ್ಚಿಸಿಕೊಳ್ಳಲು ಬಳಸುವ ಮಾರ್ಗವನ್ನಾಗಿ ಮಾಡಿಕೊಳ್ಳಬಹುದು. ಈ ವಿಷಯದಲ್ಲಿಯೂ ನಾವು ಕೆಲಸ ಮಾಡುತ್ತಿದ್ದೇವೆ’ ಎನ್ನುವ ವಸುಂಧರಾ, ಮೊದಲಿನಂತೆ ತಮ್ಮದೇ ಕಛೇರಿ ನೀಡುವುದನ್ನು ಕೂಡ ಮುಂದುವರಿಸಿದ್ದಾರೆ.

ಸುಮಾರು 200 ಬಗೆಯ ವಾದ್ಯಗಳನ್ನು ತಿಂಗಳಿಗೊಮ್ಮೆ ಬುಲೆವಾರ್ಡ್‌ಗೆ ತಲುಪಿಸಿ, ಆಮೇಲೆ ಅಲ್ಲಿಂದ ಮತ್ತೆ ಮರಳಿಸುವ ವ್ಯವಸ್ಥೆಯನ್ನು ಮಾಡುತ್ತಿರುವ ಸಂಸ್ಥೆಯು ಉಚಿತವಾಗಿ ಹೀಗೆ ನಾದದಲೆಯನ್ನು ಪಸರಿಸುತ್ತಿರುವುದು ಅಪರೂಪವೇ ಸರಿ. ಗುಂಪುಗುಂಪಾಗಿ ಬಂದು ಡ್ರಮ್ ಮೇಲೆ ಬೆರಳಾಡಿಸಿ, ಸಂಗೀತದ ರಸಾನುಭವ ಪಡೆಯುವ ಯುವಕ–ಯುವತಿಯರ ಸಂಭ್ರಮಕ್ಕೆ ಪಾರವೇ ಇಲ್ಲದ್ದನ್ನು ಬುಲೆವಾರ್ಡ್‌ನ ಬಾಲಾಜಿ ಅವರೂ ಕಂಡುಂಡಿದ್ದಾರೆ.

‘ಡ್ರಮ್ ಜಾಮ್’ 100 ನಾಟ್ ಔಟ್. ಸಂಗೀತದಾಟವಿನ್ನೂ ಬಾಕಿ ಇದೆ. ■